ವಿಷಯ : ಬಯೋಗ್ಯಾಸ್ ಅನಿಲಯಂತ್ರಗಳು ವಿಫಲಗೊಂಡಿರುವ ಬಗ್ಗೆ.

ಚುಕ್ಕೆ ರಹಿತ ಗುರುತಿನ ಪ್ರಶ್ನೆ ಸಂಖ್ಯೆ 367(492)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಪ್ರಚಾರ ಹಾಗೂ ಮಾರ್ಗದರ್ಶನದ ಅಡಿಯಲ್ಲಿ ಬಯೋಗ್ಯಾಸ್ ಅನಿಲ ಯಂತ್ರಗಳನ್ನು ಕಟ್ಟಿಸಿ, ಅವು ವಿಫಲವಾಗಿವೆ ಎಂದು ತಜ್ಞರು ಹಾಗೂ ಇಲಾಖಾಧಿಕಾರಿಗಳು ಧೃಢೀಕರಿಸಿರುವುದು ಹಾಗೂ ಅದನ್ನು ನಿಲ್ಲಿಸಿ ಮತ್ತೆ ಗೊಬ್ಬರ (ಗೋಬರ್‌ಗ್ಯಾಸ್) ಅನಿಲ ಯಂತ್ರಗಳನ್ನು ಮಾತ್ರ ಮಾಡಲು ಯೋಜನೆ ಹಾಕಿಕೊಂಡಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ)ಹಾಗಿದ್ದಲ್ಲಿ, ಈ ಅನಿಲ ಯಂತ್ರಗಳನ್ನು ನಿರ್ಮಾಣ ಮಾಡಲು ರೈತರು ಮಾಡಿದ ಸಾಲವನ್ನು ಅಥವಾ ಅದರ ಮೇಲಿನ ಬಡ್ಡಿ ದರವನ್ನಾದರೂ ಮನ್ನಾ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಬಯೋಗ್ಯಾಸ್ ಮತ್ತು ಗೊಬ್ಬರ ಅನಿಲ ಯಂತ್ರ ಎರಡೂ ಒಂದೇ. ಅನಿಲ ಯಂತ್ರಗಳನ್ನು ತಾಂತ್ರಿಕ ಪರಿಜ್ಞಾನ ಬಳಸಿ ನುರಿತ ಗಾರೆ ಕೆಲಸಗಾರರು ಮತ್ತು ಮೇಲ್ವಿಚಾರಕರ ಪರಿವೀಕ್ಷಣೆಯಲ್ಲಿ ಕಟ್ಟಿಸಲಾಗುತ್ತದೆ.

ಸಾಲ ಮನ್ನಾ ಮಾಡುವ ಅಥವಾ ಬಡ್ಡಿ ದರವನ್ನು ಮನ್ನಾ ಮಾಡುವ ಅವಕಾಶ ಇರುವುದಿಲ್ಲ. ಆದರೆ 1982-853ರಿಂದ 1984-85ರೊಳಗೆ ಬ್ಯಾಂಕ್ ಸಾಲದ ನೆರವಿನಿಂದ ನಿರ್ಮಿಸಲಾದ ಭಾಗ್ಯಲಕ್ಷ್ಮಿ ಸ್ಥಾವರ ಕೆಲಸ ನಿರ್ವಹಿಸದೇ ಇರುವಂತಹ ಪ್ರಕರಣಗಳ ಬಗ್ಗೆ ಪರಿಹಾರ ನೀಡಲು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯಲ್ಲಿ ಪ್ರಸ್ತಾಪನೆ ಇಡಲಾಗಿದೆ. ಈ ಬಗ್ಗೆ ಅಂತಿಮ ಕ್ರಮ ತೆಗೆದು ಕೊಂಡಿರುವುದಿಲ್ಲ.

ವಿಷಯ : -ಎ.ಪಿ.ಎಂ.ಸಿ.ಗಳಿಗೆ ಚುನಾವಣೆ ನೆಡಸದೆ ಇರುವಬಗ್ಗೆ

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 368(200)

ಶ್ರೀ ಡಿ.ಆರ್. ಪಾಟೀಲ್ (ಗದಗ್)

ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಹು ಕಾಲದಿಂದ ಎ.ಪಿ.ಎಂ.ಸಿ.ಗಳಿಗೆ ಚುನಾವಣೆ ನಡೆಸದೆ ಇರುವುದರಿಂದ ಈ ಸಂಸ್ಥೆಗಳು ಜನ ಪರವಾಗಿ ಕೆಲಸ ಮಾಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಎ.ಪಿ.ಎಂ.ಸಿ.ಗಳಿಗೆ ಚುನಾವಣೆ ನಡೆಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಶ್ರೀ ಮದನಗೋಪಾಲ ನಾಯಕ್ (ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು)

ಚುನಾಯಿತ ಸದಸ್ಯರು ಎ.ಪಿ.ಎಂ.ಸಿ.ಯಲ್ಲಿ ಇಲ್ಲದಿದ್ದರೂ ಸಹಾ ಅವು ರೈತರ ಪರವಾಗಿ

ಹಾಗೂ ಜನರ ಪರವಾಗಿ ಕೆಲಸ ಮಾಡುತ್ತಿವೆ.

ಚುನಾವಣೆ ನಡೆಸುವ ಬಗ್ಗೆ ಸರ್ಕಾರ ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದು.

ವಿಷಯ : - ಗ್ರಾಮ ಪಂಚಾಯತ್ ಹಾಗೂ ಜಿಲ್ಲಾಪರಿಷತ್ತುಗಳ ಚುನಾವಣೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 370(553)

ಶ್ರೀ ಡಿ.ಆರ್. ಪಾಟೀಲ್(ಗದಗ್)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರಚಿಸಲಾಗಿರುವ ಒಟ್ಟು ಗ್ರಾಮಪಂಚಾಯತ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು);

ಆ) ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾಪರಿಷತ್ ಸದಸ್ಯರ ಸಂಖ್ಯೆ ಎಷ್ಟು;

ಇ) ಗ್ರಾಮಪಂಚಾಯತ್, ತಾಲ್ಲೂಕುಪಂಚಾಯತ್ ಹಾಗೂ ಜಿಲ್ಲಾಪರಿಷತ್ತುಗಳಿಗೆ ಚುನಾವಣೆ ನಡೆಸಲು ದಿನಾಂಕ ನಿಗದಿಗೊಳಿಸಲಾಗಿದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ರಾಜ್ಯದಲ್ಲಿ ರಚಿಸಬೇಕೆಂದು ಪ್ರಸ್ತಾಪಿಸಲಾಗಿರುವ ಗ್ರಾಮಪಂಚಾಯತ್‌ಗಳ ಒಟ್ಟು ಸಂಖ್ಯೆ ಅಂದಾಜು 5590 ವಿವರವನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ವಿವರವನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಇಲ್ಲ. ಆದಾಗ್ಯೂ 1993ರ ಡಿಸೆಂಬರ್ ಅಂತ್ಯದೊಳಗೆ ಚುನಾವಣೆಯನ್ನು ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ರಾಜ್ಯದಲ್ಲಿ ರಚಿಸಲಾಗಿರುವ ಒಟ್ಟು ಗ್ರಾಮ ಪಂಚಾಯತ್‌ಗಳ ಹಾಗೂ ಪ್ರತಿ ಜಿಲ್ಲೆಯ ಜಿಲ್ಲಾ ಪರಿಷತ್ : ಜಿಲ್ಲಾ ಪಂಚಾಯತ್ ಸದಸ್ಯರ ಸಂಖ್ಯೆಗಳ ವಿವರ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತ್ ಗಳ ಸಂಖ್ಯೆ	1983 ಅಧಿನಿಯಮದ ಪ್ರಕಾರ ಜಿಲ್ಲಾ ಪರಿಷತ್ ಸದಸ್ಯರ ಸಂಖ್ಯೆ	1993 ಅಧಿ ನಿಯಮದ ಪ್ರಕಾರ ಜಿಲ್ಲಾ ಪಂಚಾಯತಿ ಸದಸ್ಯರ ಸಂಖ್ಯೆ
1	2	3	4	5
1.	ಬೆಂಗಳೂರು ನಗರ	116	-	18
2.	ಬೆಂಗಳೂರು ಗ್ರಾಮಾಂತರ	216	39	38
3.	ಚಿತ್ರದುರ್ಗ	266	45	46
4.	ಕೋಲಾರ	303	49	50
6.	ತುಮಕೂರು	314	57	54